# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ದಾವಣಗೆರೆ ವಿಭಾಗ; ದಾವಣಗೆರೆ

ಸಂ:ಕರಾಸಾ:ದಾವಿ:ಸಂ:ವಿತದಳ:223:2022-23 ದಿನಾಂಕ :22-04-2022

## ಮ್ಯಾನ್ಯುಯಲ್ ಟೆಂಡರ್ / ಕೊಟೇಶನ್ ಪ್ರಕಟಣೆ ಸಂಖ್ಯೆ : 01/2022-23
## (ತನಿಖಾ ಕಾರ್ಯಕ್ಕೆ ಲಘುವಾಹನಗಳನ್ನು ಬಾಡಿಗೆ ಆಧಾರದಲ್ಲಿ ಪಡೆಯಲು)

*******************

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ತನಿಖಾ ಕಾರ್ಯಕ್ಕಾಗಿ ಖಾಸಗಿ ವಾಹನ (ಕಾರು) ಗಳನ್ನು ತೆಗೆದುಕೊಳ್ಳುವ ಕುರಿತು ಮ್ಯಾನ್ಯುಯಲ್ ಟೆಂಡರ್ / ಕೊಟೇಶನ್ ಕರೆಯಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಾಹನಗಳು ರಾಜ್ಯ ಮತ್ತು ಅಂತರ ರಾಜ್ಯದಲ್ಲಿ ಕಾರ್ಯಾಚರಣೆ ಮಾಡುತ್ತಿದ್ದು, ಸದರಿ ಮಾರ್ಗಗಳಲ್ಲಿ ತನಿಖಾ ಕಾರ್ಯಕ್ಕೆ ಕಾರುಗಳನ್ನು ಒದಗಿಸಬೇಕಾಗಿರುವ ಕಾರಣ ಕಾರುಗಳಿಗೆ ಅಂತರ ರಾಜ್ಯ ಪರವಾನಗಿಯನ್ನು ಹೊಂದಿರಬೇಕು (**ಅಂದರೆ, ದಕ್ಷಿಣ ಭಾರತದ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರ ಪ್ರದೇಶ, ಗೋವಾ, ಕೇರಳ ಮತ್ತು ತಮಿಳುನಾಡು**) ಕಾರುಗಳನ್ನು **01 ವರ್ಷದ ಅವಧಿಗೆ** ಪಡೆಯಲಾಗುವುದು. ಹಳದಿ ಬೋರ್ಡ್ ಹೊಂದಿದ ಮತ್ತು 2019 ರ ನಂತರದ ಇತ್ತೀಚಿನ ಮಾದರಿಯ ವಾಹನಗಳನ್ನು ಬಾಡಿಗೆಗೆ ಪಡೆಯಲಾಗುವುದು. **ಪ್ರತಿ ಕಿ.ಮೀ.ಗೆ ಅತೀ ಕಡಿಮೆ ಬಾಡಿಗೆಗಾಗಿ ಬೇಡಿಕೆ ಸಲ್ಲಿಸುವ ಬೇಡಿಕೆದಾರರಿಗೆ ಆದ್ಯತೆ ನೀಡಲಾಗುವುದು.**

| ಕ್ರಮ. ಸಂ. | ವಾಹನ ಮಾದರಿ | ಒಟ್ಟು ವಾಹನಗಳು | ಸಂಚಾರ ಶಾಖೆಯಲ್ಲಿ ಇಟ್ಟಿರುವ ಮ್ಯಾನ್ಯುಯಲ್ ಟೆಂಡರ್ / ಕೊಟೇಶನ್ ಬಾಕ್ಸ್ ಗೆ ಹಾಕುವ ಇ.ಎಂ.ಡಿ ಮೊತ್ತದ ವಿವರ | **ಅವಧಿ** | ಸಂಚಾರ ಶಾಖೆಯಲ್ಲಿ ಇಟ್ಟಿರುವ ಮ್ಯಾನ್ಯುಯಲ್ ಟೆಂಡರ್ / ಕೊಟೇಶನ್ ಬಾಕ್ಸ್ ಗೆ ಹಾಕುವ **ಅರ್ಜಿ ಶುಲ್ಕ (ಜಿ.ಎಸ್.ಟಿ ಸೇರಿಸಿ)** |
|---|---|---|---|---|---|
| 1 | ಲಘು ವಾಹನ (ಕಾರು/ ಟ್ಯಾಕ್ಸಿ) | 2 ತನಿಖಾ ಕಾರ್ಯಕ್ಕೆ ಮತ್ತು 2 ವಾಹನಗಳನ್ನು ಜಾತ್ರೆ/ವಿಶೇಷ ಕಾರ್ಯಾಚರಣೆಗೆ ಸಂಸ್ಥೆಯ ಅಗತ್ಯತೆಗೆ ಅನುಗುಣವಾಗಿ | 10,000/- **(ಡಿ.ಡಿ.ಮೂಲಕ)** | 01 ವರ್ಷದವರಗೆ | 1,000+180=1,180/- **(ಡಿ.ಡಿ.ಮೂಲಕ)** |

## <u>ಷರತ್ತು ನಿಬಂಧನೆಗಳು</u>

1) ವಾಹನವನ್ನು ಸತತವಾಗಿ 12 ದಿನಗಳವರೆಗೆ ನೀಡಬೇಕಾಗುತ್ತದೆ.

2) ವಾಹನವು ಒಳ ಮಾರ್ಗಗಳ ಹಾಗೂ ಹಳ್ಳಿ ಮಾರ್ಗಗಳ, ಅಂತರರಾಜ್ಯ ಮಾರ್ಗಗಳ ಮೇಲೆ ಕಾರ್ಯಾಚರಿಸಬೇಕಾಗುತ್ತದೆ.
ವಾಹನವು ದಕ್ಷಿಣಭಾರತದ ವ್ಯಾಪ್ತಿಗೆ ರಾಜ್ಯಗಳನ್ನು ಒಳಪಟ್ಟ ಪರವಾನಿಗೆಯನ್ನು ಹೊಂದಿರತಕ್ಕದ್ದು (ಆಂಧ್ರ, ಗೋವಾ, ಕೇರಳ, ತಮಿಳುನಾಡು, ಮಹಾರಾಷ್ಟ್ರ)

3) ವಾಹನವು ಹಳದಿ ಫಲಕದ ನೊಂದಣಿಯಾಗಿರತಕ್ಕದ್ದು (Yellow Board)

4) ಪಾರ್ಕಿಂಗ್ ಫೀ, ಎಂಟ್ರಿ ಫೀ, ಟೋಲ್ ಫೀ, ಅಂತರರಾಜ್ಯ ಪರವಾನಿಗೆ ತೆರಿಗೆ/ಪರವಾನಿಗೆ ಶುಲ್ಕ ಮೋಟಾರು ವಾಹನ ಶುಲ್ಕ, ಇತ್ಯಾದಿಗಳನ್ನು ವಾಹನದ ಮಾಲಿಕರೇ/ಏಜೆನ್ಸಿರವರೇ ವೆಚ್ಚವನ್ನು ಭರಿಸತಕ್ಕದ್ದು.

5) ವಾಹನವು 2019 ರ ನಂತರದ ಮಾದರಿಯದ್ದಾಗಿರಬೇಕು ಹಾಗೂ ವಾಹನದ ಮಾಲೀಕರ /ಏಜೆನ್ಸೀರವರು ವಿಭಾಗದ ಅಗತ್ಯತೆಗೆ ಅನುಗುಣವಾಗಿ ವಾಹನಗಳನ್ನು ಒದಗಿಸಬೇಕು ಹಾಗೂ ಜಾತ್ರಾ ಹಾಗೂ ವಿಶೇಷ ಸಂದರ್ಭಗಳಲ್ಲಿ ಸಂಸ್ಥೆಯ ಅಗತ್ಯತೆಗೆ ಅನುಗುಣವಾಗಿ 1-2 ಹೆಚ್ಚಿನ ವಾಹನಗಳನ್ನು ಒದಗಿಸಲು ಬದ್ಧರಾಗಿರಬೇಕು.

6) ವಾಹನವು ಅವಘಡವಾದಲ್ಲಿ ಮೂರು ಗಂಟೆಗಳೊಳಗೆ ದುರಸ್ತಿ ಕಾರ್ಯವನ್ನು ಮಾಡಿಸತಕ್ಕದ್ದು ಅಥವಾ ನಾಲ್ಕು ಘಂಟೆ ಅವಧಿಯೊಳಗೆ ಬೇರೆ ವಾಹನದ ಪರ್ಯಾಯ ವ್ಯವಸ್ಥೆ ಮಾಡತಕ್ಕದ್ದು, ತಪ್ಪಿದಲ್ಲಿ ಪ್ರತಿ ಅವಘಡಕ್ಕೆ ರೂ.500/-ದಂಡವನ್ನು ವಿಧಿಸಲಾಗುವುದು.

7) ಟ್ಯಾಕ್ಸಿ ಮಾಲೀಕರು ಒದಗಿಸಿದ ಚಾಲಕರಿಗೆ ನಿಗಮದ ವತಿಯಿಂದ ಯಾವುದೇ ನೇಮಕಾತಿ ಆದೇಶ ನೀಡಲಾಗುವುದಿಲ್ಲ. ಹಾಗೂ ಸಂಬಳ, ಭತ್ಯೆ ಹಾಗೂ ಇತರೆ ವೆಚ್ಚಗಳನ್ನು ವಾಸ್ತವ್ಯಗಳನ್ನು ಪ್ರಾವಿಡಂಟ್ ಫಂಡ್, ಇ.ಎಸ್.ಐ. ಸೌಲಭ್ಯವನ್ನು ಟ್ಯಾಕ್ಸಿ ಮಾಲೀಕರೇ ಭರಿಸುವುದು.

8) ಟ್ಯಾಕ್ಸಿಗಳು ತನಿಖಾ ಕಾರ್ಯಾಚರಣೆ ಸಮಯದಲ್ಲಿ ಅಪಘಾತ ಸಂಭಸಿದಾಗ ತನಿಖಾ ಸಿಬ್ಬಂದಿ ಹಾಗೂ ಚಾಲಕರಿಗೆ ವೈದ್ಯೀಕೀಯ ಚಿಕಿತ್ಸೆ ಇತ್ಯಾದಿಗಳಿಗೆ ವಾಹನ ಮಾಲಿಕರು ಹಾಗು ವಿಮಾಕಂಪನಿಯು ಜವ್ಬಾರರಾಗಿರತಕ್ಕದ್ದು.

9) ಚಾಲಕರು ಚಲಾವಣೆಯುಳ್ಳ ಚಾಲನಾ ಪರವಾನಿಗೆಯನ್ನು (ಡಿ.ಎಲ್) ಹೊಂದಿರತಕ್ಕದ್ದು ಹಾಗೂ ಚಾಲಕರು ಸಂಸ್ಥೆ ವಹಿಸಿದ ಸೂಚನೆಗಳನ್ನು ಆದೇಶಗಳನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.

10) ವಾಹನಕ್ಕೆ ಇಂಧನ, ಕೀಲೆಣ್ಣೆ, ಟೈರ್, ಟ್ಯೂಬ್, ಬಿಡಿಭಾಗಗಳು,ಹೆಚ್ಚುವರಿ ಚಕ್ರ (spare tyre), ಹೆಡ್‌ಲೈಟ್, ಜಾಕ್, ವ್ಹೀಲ್ .ಸ್ಪಾನರ್, ಇತರೆ ಸಲಕರಣೆಗಳನ್ನು ವಾಹನದ ಮಾಲೀಕರು ಸ್ವಂತ ಖರ್ಚಿನಲ್ಲಿ ವಾಹನದ ಜೊತೆಗೆ ಹೊಂದಿರುವಂತೆ ನೋಡಿಕೊಳ್ಳಬೇಕು.

11) ಟ್ಯಾಕ್ಸಿ ಮಾಲೀಕರು ಟ್ಯಾಕ್ಸಿಗೆ ಅಗತ್ಯವಾದ ವಿಮೆಯನ್ನು ಮಾಡಿಸಿರಲೇಬೇಕು, ಹಾಗು ವಿಮೆಯು ಚಾಲ್ತಿಯಲ್ಲಿದ್ದು ಅದರ ವೆಚ್ಚವನ್ನು ಮಾಲೀಕರೇ ಭರಿಸಬೇಕು ಮತ್ತು ಟ್ಯಾಕ್ಸಿಯು ಹಳದಿ ಬಣ್ಣದ ರಿಜಿಸ್ಟ್ರೇಶನ್ ಸಂಖ್ಯೆಗಳ ಪ್ಲೇಟ್ ಹೊಂದಿರಬೇಕು (ಟೂರಿಸ್ಟ್) ಟ್ಯಾಕ್ಸಿ ಮಾಲೀಕರು ಪಾನ್ ಸಂಖ್ಯೆಯನ್ನು ಕಡ್ಡಾಯವಾಗಿ ನೀಡುವುದು.

12) ವಾಹನ ಮಾಲೀಕರು ತನಿಖಾ ಕಾರ್ಯಕ್ಕೆ ನಿಯೋಜಿಸಿರುವು ವಾಹನಗಳಿಗೆ **ಮೋಟಾರು ವಾಹನ ಕಾಂಪ್ರೆಹನ್ಸಿವ್ ಇನ್ಸೂರೆನ್ಸ್**ಚಾಲ್ತಿಯಲ್ಲಿ ಇರುವಂತೆ ನೋಡಿಕೊಳ್ಳತಕ್ಕದ್ದು.

13) ಸಂಸ್ಥೆಯ ಕಾರ್ಯಾಚರಣೆಯಲ್ಲಿರುವಾಗ ವಾಹನವು ಯಾವುದೇ ರೀತಿಯ **ಅಪಘಾತ / ಅವಘಡ/ಮತ್ತು ಜಖಂ/ಹಾನಿ/ದುಃಖಪಾತಗಳಿಗೆ ಒಳಗಾದಲ್ಲಿ ವಾಹನದ ಮಾಲೀಕರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ**. ಸಂಸ್ಥೆಯು ಯಾವುದೇ ರೀತಿಯ (ಬಾಧ್ಯತೆ / claim )ಅವಘಡ/ಅಪಘಾತ ಮತ್ತು ದುಃಖಪಾತ ಹಾನಿ/ಜಖಂಗಳಿಗೆ **ಜವಬ್ದಾರರಾಗಿರುವುದಿಲ್ಲ** ಹಾಗೂ ಇತರೆ ಯಾವುದೇ ಓರೆಕೋರೆ (tortuous liability) ಗಳಿಗೆ ಸಂಸ್ಥೆಯು ಬಾಧ್ಯತೆಯಾಗಿರುವುದಿಲ್ಲ.

14) ವಾಹನಗಳ ನಿರ್ವಹಣೆಯು (maintenance) ಮಾಲೀಕರ/ಏಜೆನ್ಸೀರವರ ಜವಾಬ್ದಾರಿಯಾಗಿರುತ್ತದೆ.

15) ನಿಗದಿ ಪಡಿಸಿದ ದಿನಗಳಂದು ಫಾಹನವನ್ನು ಪೂರೈಸಬೇಕು.

16) ಒಂದು ತಿಂಗಳಲ್ಲಿ ಒಂದು ತಾಸಿನೊಳಗಡೆ, 3 ಸಲ ಕಾರ್ಯಾಚರಣೆಗೆ ತಡವಾಗಿ ವಾಹನವನ್ನು ಪೂರೈಸಿದಾಗ ಯಾವುದೇ ದಂಡ ವಿಧಿಸಲಾಗುವುದಿಲ್ಲ. ಇದನ್ನು ಹೊರತು ಪಡಿಸಿ ತಡವಾದ ಪ್ರತಿ ವಾಹನಕ್ಕೆ ಪ್ರತಿ ಗಂಟೆಗೆ ರೂ. 50/-ರಂತೆ ದಂಡ ವಿಧಿಸಲಾಗುವುದು. (ಗರಿಷ್ಠ ರೂ.200/-ರವರೆಗೆ)

17) ವಿಭಾಗೀಯ ಕೇಂದ್ರ ಸ್ಥಾನದಲ್ಲಿ ಇಂಧನದ ಬೆಲೆಗಳಲ್ಲಿ ಏರಿಳತಗಳ ಅನುಗುಣವಾಗಿ ದರಗಳನ್ನು ಆಕರಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ.

18) ವಾಹನವನ್ನು ದಿನವೊಂದಕ್ಕೆ 16 ಗಂಟೆಯವರೆಗೆ ಉಪಯೋಗಿಸಬಹುದಾಗಿರುತ್ತದೆ. ಒಂದು ವೇಳೆ ದಿನವೊಂದಕ್ಕೆ 16 ಗಂಟೆಗೆ ಮೇಲ್ಪಟ್ಟು ವಾಹನವನ್ನು ಉಪಯೋಗಿಸಿದಲ್ಲಿ ಯಾವುದೇ ಹೆಚ್ಚುವರಿ ಭತ್ಯೆ/ಬಾಟಾ ಇತರೆ ಮೊತ್ತವನ್ನು ನೀಡಲಾಗುವುದಿಲ್ಲ.

19) ತನಿಖಾ ಕಾರ್ಯಕ್ಕೆ ನಿಯೋಜಿಸಿದ ವಾಹನಗಳು ದಿನವೊಂದಕ್ಕೆ ಕನಿಷ್ಠ 250 ಕಿ.ಮೀ ಕ್ರಮಿಸಲಾಗುವುದು, ಒಂದುವೇಳೆ ಕ್ರಮಿಸಿದ ಕಿ.ಮೀ. ದಿನಕ್ಕೆ 250 ಕಿ.ಮೀ. ಗಿಂತ ಕಡಿಮೆ ಕ್ರಮಿಸಿದಲ್ಲಿ ,**ವಾಸ್ತವಿಕ ಕ್ರಮಿಸಿದ ಕಿ.ಮೀಗೆ ಮಾತ್ರ** ಬಿಲ್ ಪಾವತಿಸಲಾಗುವುದು.

20) ಪ್ರತಿ 15 ದಿನಗಳಿಗೊಮ್ಮೆ ವಾಹನದ ಬಾಡಿಗೆ ಮೊತ್ತವನ್ನು ಪಾವತಿಸಲಾಗುವುದು. ಬಿಲ್ ಪಾವತಿಸಲು ಮುದ್ರಿತ ಬಿಲ್ಲುಗಳನ್ನು ನೀಡುವುದು ಹಾಗೂ ಸರ್ಕಾರದ ಆದೇಶದನ್ವಯ ಸರಕು ಮತ್ತು ಸೇವಾ ತೆರೆಗೆಯನ್ನು (ಜಿ.ಎಸ್.ಟಿ.) ವಾಹನ ಮಾಲೀಕರೇ ಪಾವತಿಸುವುದು ಮತ್ತು ವಾಹನ ಮಾಲೀಕರು ಸರಕು ಮತ್ತು ಸೇವಾ ತೆರೆಗೆ ರಿಜಿಸ್ಟ್ರೇಶನ್ ಮಾಡಿಸಿರಬೇಕು ಹಾಗೂ ಜಿ.ಎಸ್.ಟಿ. ಸಂಖ್ಯೆಯನ್ನು ನೀಡತಕ್ಕದ್ದು ಮುಂದುವರೆದು ವಾಹನ ಮಾಲೀಕರು ಆಧಾಯ ತೆರಿಗೆ ಸಂಖ್ಯೇಯನ್ನು (ಪಾನ್ ಕಾರ್ಡ ) ನೀಡತಕ್ಕದ್ದು, ಕಾಲಾನುಕಾಲಕ್ಕೆ ಬದಲಾಗುವ ಆಧಾಯ ತೆರಿಗೆ ನಿಯಮದನ್ವಯ ಮೂಲದಲ್ಲಿಯೇ ಆಧಾಯ ತೆರಿಗೆಯನ್ನು ಕಡಿತಗೊಳಿಸುವುದು.

21) ತನಿಖಾ ಕಾರ್ಯಕ್ಕೆ ಗ್ಯಾಸ ಅಳವಡಿಸಿದ ವಾಹನಗಳನ್ನು ಪೂರೈಸುವಂತಿಲ್ಲ.

22) ವಾಹನಗಳ ಪೂರೈಕೆಗೆ ಗುತ್ತಿಗೆದಾರರಾಗಿ ಆಯ್ಕೆಯಾದನಂತರ, ಗುತ್ತಿಗೆದಾರರು ಒದಗಿಸುವ ಕಾರುಗಳ ಕ್ರಮಿಸುವ ಕಿ.ಮೀಟರುಗಳ ಮೀಟರನ್ನು ತಪಾಸಣೆ ಮಾಡಿ ತೆಗೆದುಕೊಳ್ಳಲಾಗುವುದು.

23) ತನಿಖಾ ಕಾರ್ಯದ ಯಾವುದೇ ವಾಹನದಲ್ಲಿ ಸ್ಪೀಡೊ ಮೀಟರ್ ಅಥವಾ ಇನ್ನಾವುದೇ ದೋಷಗಳು ಕಂಡುಬಂದಲ್ಲಿ ಗುತ್ತಿಗೆಯನ್ನು ರದ್ದುಪಡಿಸಿ ಭದ್ರತಾ ಠೇವಣಿ ಮತ್ತು ಬಾಕಿ ಇರುವ ಬಾಡಿಗೆ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗು ಗುತ್ತಿಗೆ ದಾರರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು.

24) ಯಾವುದೇ ರೀತಿಯ ವ್ಯಾಜ್ಯಗಳು ಉಂಟಾದಲ್ಲಿ ವಿಭಾಗೀಯ ನಿಯಂತ್ರಣಾಧಿಕಾರಿಗಳು, ದಾವಣಗೆರೆ ವಿಭಾಗ ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ ರವರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ

25) ವಾಹನಗಳನ್ನು ಕರ್ತವ್ಯಕ್ಕೆ ತೆಗೆದುಕೊಳ್ಳುವ / ಬಿಡುವ ಅಧಿಕಾರ ಸಂಸ್ಥೆಯದ್ದಾಗಿರುತ್ತದೆ.

26) ಟ್ಯಾಕ್ಸಿಯು ಅಪಘಾತಕ್ಕೀಡಾದರೆ ಅದರ ಖರ್ಚು ವೆಚ್ಚಗಳನ್ನು ಅಪಘಾತದಲ್ಲಿ ಪ್ರಾಣಾಪಾಯ ಅಥವಾ ಗಾಯಗೊಂಡವರ ಪರಿಹಾರದ ಬಗೆಗಿನ ಕ್ಲೈಂಗಳ ಜವಬ್ದಾರಿಯು ಟ್ಯಾಕ್ಸಿ ಮಾಲೀಕರು ಮತ್ತು ವಿಮಾ ಕಂಪನಿಗೆ ಸಂಬಂಧಿಸಿರುತ್ತದೆ.

27) ಟ್ಯಾಕ್ಸಿ ಮಾಲೀಕರು ಸರ್ಕಾರದ ತೆರಿಗೆ ಹಾಗೂ ಕಾರ್ಮಿಕ ವಿಷಯಗಳಿಗೆ ಸಂಬಂದಿಸಿದ ಎಲ್ಲಾ ನಿಯಮಾವಳಿಗಳನ್ನು ಪರಿಪಾಲಿಸಲು ಬದ್ದರಾಗಿದ್ದು, ಈ ಕುರಿತು ಕ.ರಾ.ರ.ಸಾ.ನಿಗಮವು ಆರ್ಥಿಕತೆಯನ್ನೊಳಗೊಂಡ ಯಾವುದೇ ಬಾದ್ಯತೆಗಳಿಗೆ ಹೊಣೆಗಾರರಾಗಿರುವುದಿಲ್ಲ.

28) ಕರ್ನಾಟಕ ಸರ್ಕಾರವು ಕನಿಷ್ಟ ವೇತನ ಕಾಯ್ದೆಯಡಿಯಲ್ಲಿ ಅನುಸೂಚಿಸಿದ ವೇತನ ದರಗಳನ್ನು ನಿಗಧಿಪಡಿಸಿದ್ದು, ನಿಮ್ಮ ಚಾಲಕರಿಗೆ ಆ ವೇತನ ದರಗಳಿಗಿಂತ ಕಡಿಮೆ ವೇತನ ಪಾವತಿಸತಕ್ಕದ್ದಲ್ಲ.

29) ಟ್ಯಾಕ್ಸಿ ಮಾಲೀಕರು ಟ್ಯಾಕ್ಸಿ ಒದಗಿಸುವ ಸೇವೆಯನ್ನು ಒದಗಿಸುವ ಸಂಬಂಧ ನಿಯಮಗಳ ಪ್ರಕಾರ ಅವಶ್ಯಕತೆ ಇದ್ದಲ್ಲಿ ಈ ಕೆಳಕಂಡ ಕಾಯ್ದೆಗೆ ನೊಂದಣಿ ಮಾಡಿರಬೇಕು.

ಅ) ಕಾರ್ಮಿಕ ಕಾಯ್ದೆ

ಆ) ಕಾರ್ಮಿಕ ಭವಿಷ್ಯನಿಧಿ (ಇ.ಪಿ.ಎಫ್) ಕಾಯ್ದೆ

ಇ) ರಾಜ್ಯ ಕಾರ್ಮಿಕ ವಿಮಾ (ಇ.ಎಸ್.ಐ) ಕಾಯ್ದೆ

ಈ) ಆಧಾಯ ತೆರಿಗೆ ಕಾಯ್ದೆ

ಉ) ಸೇವಾ ತೆರಿಗೆ ಕಾಯ್ದೆ

ಊ) ಪಾನ್ ಕಾರ್ಡ ಹೊಂದಿರಬೇಕು.

30) ತನಿಖಾ ಕಾರ್ಯದ ವಾಹನಗಳ ಪೂರೈಕೆಯು ಸಮಾಧಾನಕರವಲ್ಲವೆಂದು ಕಂಡುಬಂದಲ್ಲಿ ಗುತ್ತಿಗೆಯನ್ನು ಏಕಪಕ್ಷಿಯವಾಗಿ ರದ್ದುಪಡಿಸಿ, ಭದ್ರತಾ ಠೇವಣಿ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

31) ಸಂಸ್ಥೆಯ ನೌಕರ / ನೌಕರರ ಮಕ್ಕಳು ಹಾಗೂ ಸಂಬಂಧಿಕರು ಟೆಂಡರ್ ನಲ್ಲಿ ಭಾಗವಹಿಸುವಂತಿಲ್ಲ. ಟ್ಯಾಕ್ಸಿಯ ಚಾಲಕರು ಉತ್ತಮ ಹಿನ್ನಲೆಯವರಾಗಿರತಕ್ಕದ್ದು, ಚಾಲ್ತಿಯಲ್ಲಿರುವ ಅಧಿಕೃತ ವಾಹನ ಚಾಲನ ಲೈಸನ್ಸ್, ಬ್ಯಾಡ್ಜ್ ಹೊಂದಿರಬೇಕು.ಸದರಿಯವರಲ್ಲಿ ಯಾವುದೇ ಲೋಪವಿದ್ದಲ್ಲಿ ಪೂರ್ವ ಸೂಚನೆಯಿಲ್ಲದೆ ಕರಾರು ಒಪ್ಪಂದವನ್ನು ರದ್ದುಪಡಿಸಲಾಗುವುದು, ಟ್ಯಾಕ್ಸಿ ಮಾಲೀಕರು ವಾಹನದ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಟ್ಯಾಕ್ಸ ಕಾರ್ಡ್ ಇನ್ಸೂರೆನ್ಸ್, ಮಾಲಿನ್ಯರಹಿತ ಸರ್ಟಿಫಿಕೇಟ್, ಪರ್ಮಿಟ್, ಚಾಲಕರ ಲೈಸನ್ಸ್ ಮತ್ತು ಬ್ಯಾಡ್ಜ್ , ಸರ್ಟಫೈಡು ಪ್ರತಿಯನ್ನು ಸಲ್ಲಿಸುವುದು.

32) ವಾಹನದ ಮಾಲಿಕರು /ಏಜೆನ್ಸೀಯವರು ವಾಹನವನ್ನು ಸಂಸ್ಥೆಯ ಸೇವೆಯಿಂದ ಹಿಂಪಡೆಯಲು ಇಚ್ಚಿಸಿದಲ್ಲಿ ಕನಿಷ್ಠ 30 ದಿನಗಳ ಮುಂಚಿತವಾಗಿ ಲಿಖಿತವಾಗಿ ತಿಳಿಸತಕ್ಕದ್ದು.

33) ಸಂಸ್ಥೆಯು ಚಾಲಕರ ಬದಲಾವಣೆಯನ್ನು ಬಯಸಿದಲ್ಲಿ ವಾಹನದ ಮಾಲಿಕರು / ಏಜೆನ್ಸೀರವರು ಚಾಲಕರನ್ನು ಬದಲಾಯಿಸತಕ್ಕದ್ದು.

34) ಕರಾರು ಒಪ್ಪಂದದ ಅವಧಿಯು 01 **ವರ್ಷಕ್ಕೆ** ಸೀಮಿತವಾಗಿರುತ್ತದೆ.

36) **<u>ಇ.ಎಂ.ಡಿ</u>**

**1) ಇ.ಎಂ.ಡಿ ಮೊತ್ತ ರೂ.10,000/-ಗಳನ್ನು ಹಾಗೂ ಅರ್ಜಿ ಶುಲ್ಕದ ಮೊತ್ತ ರೂ.1,180-00 ಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿ ಕ.ರಾ.ರ.ಸಾರಿಗೆ ನಿಗಮ, ದಾವಣಗೆರೆ ವಿಭಾಗ ರವರ ಹೆಸರಿನಲ್ಲಿ ( Divisional Controller, KSRTC Davanagere) ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ.ಯನ್ನು ಮ್ಯಾನ್ಯುಯಲ್ ಟೆಂಡರ್ / ಕೊಟೇಶನ್ ತೆರೆಯುವ ದಿ : 06.05.2022 ಬೆಳಗ್ಗೆ 11-00 ಗಂಟೆಯ ಒಳಗಾಗಿ ವಿಭಾಗೀಯ ಕಛೇರಿ ಸಂಚಾರ ಶಾಖೆಯಲ್ಲಿರುವ ಬಾಕ್ಸ್‌ನಲ್ಲಿ ಹಾಕುಬೇಕು.**

**2) ಇ.ಎಂ.ಡಿ ರೂ 10,000-00 ಹಾಗೂ ಅರ್ಜಿ ಶುಲ್ಕದ ಮೊತ್ತ ರೂ.1,180-00 ಮೊತ್ತದ ಡಿಡಿಯನ್ನು <u>ದಿನಾಂಕ : 06.05.2022 ರಂದು</u> 11-00 ಗಂಟೆಯೊಳಗಡೆ ವಿಭಾಗೀಯ ಕಛೇರಿ ದಾವಣಗೆರೆ ಕಛೇರಿ ವೇಳೆಯಲ್ಲಿ ಸಲ್ಲಿಸಬೇಕು. ನಂತರ ಸದರಿ ಕೋಟೇಶನ್ ನ್ನು ದಿ :06.05.2022 ರಂದು ಮದ್ಯಾಹ್ನ 15.00 ಗಂಟೆಗೆ ತೆರೆಯಲಾಗುವುದು.**

3) ಇ.ಎಂ.ಡಿ **ಪಾವತಿಸದ** ಬೇಡಿಕೆದಾರರ ಬೇಡಿಕೆಯನ್ನು ತಿರಸ್ಕರಿಸಲಾಗುವುದು.

4). ಇ.ಎಂ.ಡಿ.ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ. ಆಯ್ಕೆಯಾಗದ ಬಿಡ್ಡುದಾರರು ಪಾವತಿಸಿದ ಇ.ಎಂ.ಡಿ.ಮೊತ್ತವನ್ನು ಟೆಂಡರ್ ಪ್ರಕ್ರಿಯೆ ಮತ್ತು ಕರಾರು ಒಪ್ಪಂದ ಮುಗಿದ ನಂತರ ನೀಡಲಾಗುವುದು.

**5) ಆಯ್ಕೆಯಾದ ಬಿಡ್ಡುದಾರರು ನಿಗದಿತ ಅವಧಿಯಲ್ಲಿ ಭದ್ರತಾ ಠೇವಣಿ ಪಾವತಿಸಲು ವಿಫಲರಾದಲ್ಲಿ ಹಾಗೂ ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ ಹಾಗೂ ಟೆಂಡರು ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿದಲ್ಲಿ ಇ.ಎಂ.ಡಿ. ಮೊತ್ತವನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**

37) **<u>ಭದ್ರತಾ ಠೇವಣಿ</u>**

**1) ಆಯ್ಕೆಯಾದ ಬಿಡ್ಡುದಾರರು ರೂ.25,000/- (ಇಪ್ಪತ್ತೈದು ಸಾವಿರ ರೂಪಾಯಿ) ಭದ್ರತಾ ಠೇವಣಿಯನ್ನು ಆಯ್ಕೆಯಾದ 07 ದಿನಗಳೊಳಗಾಗಿ ಪಾವತಿಸಿ ಸಂಸ್ಥೆಯೊಂದಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.**

2) ಭದ್ರತಾ ಠೇವಣಿಯನ್ನು ಕರಾರು ಒಪ್ಪಂದದ ಅವಧಿ ಮುಗಿದ ನಂತರ ಪಾವತಿಸಲಾಗುವುದು.

3) ಭದ್ರತಾ ರೇವಣಿಗೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

**ಮ್ಯಾನ್ಯುಯಲ್ ಟೆಂಡರ್ / ಕೊಟೇಶನ್ ನಲ್ಲಿ <u>ಸಲ್ಲಿಸಬೇಕಾದ ದಾಖಲಾತಿಗಳು</u>**

1. **ಸಂಸ್ಥೆಗೆ ಒದಗಿಸುತ್ತಿರುವ ಹಳದಿ ನಾಮ ಫಲಕ ಹೊಂದಿರುವ ಕಾರುಗಳ ನೊಂದಣಿ ಸಂಖ್ಯೆ ಹಾಗೂ ವಿವರ**
2. **ವಾಹನದ ನೊಂದಣಿ ಪ್ರಮಾಣ ಪತ್ರ (R.C.BOOK) ನೆರಳಚ್ಚು ಪ್ರತಿ**
3. **ರಾಜ್ಯದಲ್ಲಿ ಕಾರ್ಯಚರಣೆ ಹೊಂದಿರುವ ಕಾರುಗಳ ಪರವಾನಿಗೆ ಹೊಂದಿದ ಪ್ರತಿ**
4. **ವಾಯಿದೆ ಹೊಂದಿರುವ ವಿಮಾ ಪ್ರತಿ**
5. **ವಾಯಿದೆ ಹೊಂದಿರುವ ವಾಯು ಮಾಲಿನ್ಯ ಪ್ರಮಾಣ ಪ್ರತಿ**
6. **ವಾಹನ ಮಾಲಿಕರ ಗುರುತಿನ ಚೀಟಿ ಮತ್ತು ಪಾನ್ ಕಾರ್ಡ್ ಇವುಗಳ ನೆರಳಚ್ಚು ಪ್ರತಿ**
7. **ವಾಯಿದೆ ಹೊಂದಿರುವ ವಾಹನದ ಮಾಲೀಕರ ಚಾಲಕರ ಲೈಸನ್ಸ್ ಪ್ರತಿ**
8. **2015 ರ ವರ್ಷದ ನಂತರದಲ್ಲಿ ನೊಂದಣಿ ಪ್ರಾಧಿಕಾರದಲ್ಲಿ ನೊಂದಾಯಿಸಿದ ಪ್ರತಿ (R.C.certificate)**
9. **ವಾಹನದ ಮಾಲಿಕರ ವಿಳಾಸ ದೃಢೀಕರಣದ ಯಾವುದಾದರೂ ದಾಖಲೆಗಳ ನೆರಳಚ್ಚು ಪ್ರತಿ**
10. **ಇ.ಎಂ.ಡಿ ಮೊತ್ತದ ಮತ್ತು ಅರ್ಜಿ ಶುಲ್ಕದ ಡಿ.ಡಿ.ಸ್ಕ್ಯಾನ್ ಪ್ರತಿ**

ತಾವು ಸಲ್ಲಿಸಿರುವ ವಿವರಗಳ ದಾಖಲಾತಿಗಳನ್ನು ವಿಭಾಗೀಯ ಕಛೇರಿಯ ಸಂಚಾರ ಶಾಖೆಯಲ್ಲಿ ಸಲ್ಲಿಸಬೇಕಿರುತ್ತದೆ. ನಿಗದಿತ ದಿನಾಂಕ ಹಾಗೂ ಸಮಯದ ನಂತರ ಬರುವ / ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ / ಪರಿಗಣಿಸುವುದಿಲ್ಲ. **ಮ್ಯಾನ್ಯೂಯಲ್ ಟೆಂಡರ್ / ಕೊಟೇಶನ್ ದಿನಾಂಕ: 06.05.2022** ರಂದು ಮಧ್ಯಾಹ್ನ 15–00 ಗಂಟೆಗೆ ತೆರೆಯಲಾಗುವುದು. ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾರಿಗೆ ನಿಗಮ, ದಾವಣಗೆರೆ ವಿಭಾಗ, ದಾವಣಗೆರೆ ರವರಲ್ಲಿ ಸಂಪರ್ಕಿಸಲು ಕೋರಲಾಗಿದ್ದು, ಸಂಪರ್ಕಿಸಬಹುದಾದ ದೂರವಾಣಿ ಸಂ: 77609 90452(ವಿಭಾಗೀಯ ಸಂಚಾಲನಾಧಿಕಾರಿ) ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ **ನಿಗಮದ ವೆಬ್‌ಸೈಟ್ "ksrtc.karnataka.gov.in" ನಿಂದ** ಮಾಹಿತಿ ಪಡೆಯಬಹುದಾಗಿರುತ್ತದೆ.

**ಮ್ಯಾನ್ಯೂಯಲ್ ಟೆಂಡರ್ / ಕೊಟೇಶನ್** ಪ್ರಕಟಿಸಿರುವುದನ್ನು ಸ್ವೀಕರಿಸುವ, ತಿರಸ್ಕರಿಸುವ, ರದ್ದುಪಡಿಸುವ, ತಡೆಹಿಡಿಯುವ, ಮುಂದೂಡುವ, ಮಾರ್ಪಾಡು ಮಾಡುವ ಅಥವಾ ಯಾವುದೇ ಮುನ್ಸೂಚನೆ ಇಲ್ಲದೆ **ಮ್ಯಾನ್ಯೂಯಲ್ ಟೆಂಡರ್ / ಕೊಟೇಶನ್ ನಲ್ಲಿ** ಆಯ್ಕೆ ಮಾಡುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

| | | |
|---|---|---|
| 1 | **ಮ್ಯಾನ್ಯೂಯಲ್ ಟೆಂಡರ್ / ಕೊಟೇಶನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ** | **06.05.2022 ರಂದು ಬೆಳಿಗ್ಗೆ 11.00 ಘಂಟೆಯೊಳಗಾಗಿ** |
| 2 | **ಮ್ಯಾನ್ಯೂಯಲ್ ಟೆಂಡರ್ / ಕೊಟೇಶನ್ ತೆರೆಯುವ ದಿನಾಂಕ** | **06.05.2022 ರಂದು ಮದ್ಯಾಹ್ನ 15.00 ಘಂಟೆಗೆ** |

**–ಸಹಿ–**

**ವಿಭಾಗೀಯ ನಿಯಂತ್ರಣಾಧಿಕಾರಿ,**
**ಕ.ರಾ.ರ.ಸಾರಿಗೆ ನಿಗಮ:ದಾವಣಗೆರೆ**

ಪ್ರತಿಯನ್ನು :

- ✓ **ವಂದನೆಗಳೊಂದಿಗೆ,** ಮುಖ್ಯ ಸಂಚಾರ ವ್ಯವಸ್ಥಾಪಕರು(ಕೇತದ), ಕರಾರಸಾ ನಿಗಮ, ಬೆಂಗಳೂರು, ರವರುಗಳ ಮಾಹಿತಿಗಾಗಿ ಸಲ್ಲಿಸಲಾಗಿದೆ.
- ✓ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ ಮಾಹಿತಿಗೆ ಹಾಗೂ ಹೆಚ್ಚಿನ ಪ್ರತಿಗಳನ್ನು ಪ್ರಮುಖ ನಿಲ್ದಾಣಗಳಲ್ಲಿನ ಸೂಚನಾ ಫಲಕಗಳ ಮೇಲೆ ಆಸಕ್ತರ ಮಾಹಿತಿಗಾಗಿ ಪ್ರಕಟಿಸಲು ಕೋರಲಾಗಿದೆ.
- ✓ ಟೆಂಡರ್ ಕಮಿಟಿಯ ಸದಸ್ಯರುಗಳಾದ ವಿಭಾಗೀಯ ಸಂಚಾರ ಅಧಿಕಾರಿ, ಸಹಾಯಕ ಲೆಕ್ಕಾಧಿಕಾರಿಗಳು, ಭದ್ರತಾ ಮತ್ತು ಜಾಗೃತಾಧಿಕಾರಿಗಳು, ಕಾನೂನು ಅಧಿಕಾರಿ, ವಿಭಾಗೀಯ ಯಾಂತ್ರಿಕ ಅಭಿಯಂತರರು, ದಾವಣಗೆರೆ ವಿಭಾಗ ರವರ ಮಾಹಿತಿಗಾಗಿ ಹಾಗೂ **ದಿನಾಂಕ: 06.05.2022 ರಂದು 15–00** ಘಂಟೆಗೆ ನಿಗದಿಪಡಿಸಿರುವ ಮ್ಯಾನ್ಯುಯಲ್ ಟೆಂಡರ್ / ಕೋಟೇಶನ್ ಪ್ರಕ್ರಿಯೆಯಲ್ಲಿ ಖುದ್ದಾಗಿ ಹಾಜರಿರಲು ತಿಳಿಸಿದೆ.
- ✓ ಘಟಕ ವ್ಯವಸ್ಥಾಪಕರು, ಕ.ರಾ.ರ.ಸಾರಿಗೆ ನಿಗಮ, ದಾವಣಗೆರೆ ವಿಭಾಗ ರವರುಗಳ ಮಾಹಿತಿಗಾಗಿ ಹಾಗೂ ಪ್ರತಿಯನ್ನು ಘಟಕ ಮತ್ತು ಬಸ್ ನಿಲ್ದಾಣದ ಸೂಚನಾ ಫಲಕಕ್ಕೆ ಅಂಟಿಸಿ ಆಸಕ್ತರ ಮಾಹಿತಿಗಾಗಿ ಪ್ರದರ್ಶಿಸಲು ಹಾಗೂ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.
- ✓ ಸಹಾಯಕ ಆಡಳಿತಾಧಿಕಾರಿ, ಕ.ರಾ.ರ.ಸಾರಿಗೆ ನಿಗಮ, ದಾವಣಗೆರೆ ವಿಭಾಗ ರವರ ಮಾಹಿತಿಗಾಗಿ ಹಾಗೂ ಸದರಿ ಪ್ರಕಟಣೆಯನ್ನು ವಿಭಾಗೀಯ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ದಾವಣಗೆರೆ ವಿಭಾಗ

## ಅರ್ಜಿ ನಮೂನೆ

ಇಂದ,

– ------------------------

-------------------------

-------------------------

ಮಾನ್ಯರೆ,

ವಿಷಯ:-ದಾವಣಗೆರೆ ವಿಭಾಗದ ಮಾರ್ಗ ತನಿಖಾ ಕಾರ್ಯಕ್ಕೆ ಬಾಡಿಗೆ ಆಧಾರದ ಮೇಲೆ ಖಾಸಗಿ ಕಾರುಗಳನ್ನು ಒದಗಿಸುವ ದರ ಪಟ್ಟಿಯನ್ನು ಸಲ್ಲಿಸುತ್ತಿರುವ ಬಗ್ಗೆ.

********

ಮೇಲ್ಕಂಡ ಉಲ್ಲೇಖಿತ ಪ್ರಕಟಣೆ ಸಂಖ್ಯೆ --------------ರೀತ್ಯಾ ನಾನು ಕ.ರಾ.ರ.ಸಾ.ನಿಗಮದ ದಾವಣಗೆರೆ ವಿಭಾಗದ ಮಾರ್ಗ ತನಿಖಾ ಕಾರ್ಯಕ್ಕೆ ಬಾಡಿಗೆ ಆಧಾರದ ಮೇಲೆ ಕಾರುಗಳನ್ನು ಒದಗಿಸಲು ಇಚ್ಛೆಯುಳ್ಳವನಾಗಿದ್ದು, ನಾನು ಪ್ರತಿ ಕಿ.ಮೀ.ಗೆ ದರ ಪಟ್ಟಿಯನ್ನು ಸಲ್ಲಿಸುತ್ತಿದ್ದು, ಅದಕ್ಕಾಗಿ ನಾನು ಈ ಕೆಳಕಂಡ ನನ್ನ ದರವನ್ನು ನಮೂದಿಸಿರುತ್ತೇನೆ.

ಅ) ಖಾಸಗಿ ವಾಹನದ ಮಾಲಿಕನಾದ ನಾನು ಸೇವಾ ತೆರಿಗೆ / ಜಿ.ಎಸ್.ಟಿ. ಒಳಗೊಂಡು ಪ್ರತಿ ಕಿ.ಮೀ.ಗೆ ವಿಧಿಸುವ ದರ -------(ಅಕ್ಷರಗಳಲ್ಲಿ ------------------------------------------------)

ನಾನು ತಮ್ಮ ಮ್ಯಾನ್ಯೂಯಲ್ ಟೆಂಡರ್ / ಕೊಟೇಶನ್ ಪ್ರಕಟಣೆಯಂತೆ ಅರ್ಜಿಯೊಂದಿಗೆ ಪಡೆದಿರುವ ಷರುತ್ತು ಮತ್ತು ನಿಬಂಧನೆಗಳ ನಿಯಮಗಳನ್ನು ಓದಿ ತಿಳಿದು ಒಪ್ಪಿಕೊಂಡು ಅವುಗಳಿಗೆ ನಾನು ಒದಗಿಸುವ ಕಾರುಗಳ ವಿವರ ಅರ್ಜಿಯಲ್ಲಿ ಸಲ್ಲಿಸಿರುತ್ತೇನೆ.

ವಂದನೆಗಳೊಂದಿಗೆ,

(ಅರ್ಜಿದಾರರ ಸಹಿ)

---------------------------------------------------------------------

ಕಛೇರಿಯ ಉಪಯೋಗಕ್ಕಾಗಿ

ಮೇಲ್ಕಂಡ ಮ್ಯಾನ್ಯೂಯಲ್ ಟೆಂಡರ್ / ಕೊಟೇಶನ್ ಪ್ರಕಟಣೆಯಂತೆ ತನಿಖಾ ಕಾರ್ಯಕ್ಕೆ ಪ್ರತಿ ಕಿ.ಮೀ.ಗೆ ವಿಧಿಸಿರುವ ದರ -----------(ಅಕ್ಷರಗಳಲ್ಲಿ ----------------------------------------)

ಅರ್ಜಿದಾರರ ಹೆಸರು.
ಟ್ರಾವೆಲ್ಸ್ ಏಜೆನ್ಸಿ ಹೆಸರು ಮತ್ತು ವಿಳಾಸ.
ಅರ್ಜೆ ಶುಲ್ಕ, ಡಿ.ಡಿ. ಸಂಖ್ಯೆ.
ದಿನಾಂಕ ಮತ್ತು ಬ್ಯಾಂಕಿನ ಹೆಸರು
ಸಮಕ್ಷಮದಲ್ಲಿ

# ಕ.ರಾ.ರ.ಸಾ.ನಿಗಮ: ದಾವಣಗೆರೆ ವಿಭಾಗ: ದಾವಣಗೆರೆ

ಸಂ/ಕರಾಸಾ/ದಾವಿ/ವಿತದ/ **/22-23** ದಿನಾಂಕ:**22.04.2022**

**ಮ್ಯಾನ್ಯುಯಲ್ ಟೆಂಡರ್ / ಕೊಟೇಶನ್ ಪ್ರಕಟಣೆ ಸಂಖ್ಯೆ : 01/2022-23**
**(ತನಿಖಾ ಕಾರ್ಯಕ್ಕೆ ಲಘುವಾಹನಗಳನ್ನು ಬಾಡಿಗೆ ಆಧಾರದಲ್ಲಿ ಪಡೆಯಲು)**

*****

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ತನಿಖಾ ಕಾರ್ಯಕ್ಕಾಗಿ ಖಾಸಗಿ ವಾಹನ (ಕಾರು) ಗಳನ್ನು ತೆಗೆದುಕೊಳ್ಳುವ ಕುರಿತು ದಿನಾಂಕ : 22.04.2022 ರಿಂದ ಮ್ಯಾನ್ಯುಯಲ್ ಟೆಂಡರ್/ ಕೊಟೇಶನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಮ್ಯಾನ್ಯುಯಲ್ ಟೆಂಡರ್ / ಕೊಟೇಶನ್ ದಾಸ್ತಾವೇಜುಗಳನ್ನು ನಿಗಮದ ವೆಬ್‌ಸೈಟ್ **“ksrtc.karnataka.gov.in”** ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸುವ ದೂರವಾಣಿ ಸಂಖ್ಯೆ ವಿಭಾಗೀಯ ಸಂಚಾರ ಅಧಿಕಾರಿ -7760990452

ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾರಿಗೆ ನಿಗಮ:ದಾವಣಗೆರೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ತನಿಖಾ ಕಾರ್ಯಕ್ಕಾಗಿ ಖಾಸಗಿ ವಾಹನ (ಕಾರು) ಗಳನ್ನು ತೆಗೆದುಕೊಳ್ಳುವ ಕುರಿತು ದಿನಾಂಕ : 22.04.2022 ರಿಂದ ಮ್ಯಾನ್ಯುಯಲ್ ಟೆಂಡರ್/ ಕೊಟೇಶನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸದರಿ ಪ್ರಕಟಣೆಯನ್ನು ಹೊರಡಿಸಿ ತಮ್ಮ ಸಹಿಗಾಗಿ ಮಂಡಿಸಿದೆ ಹಾಗೂ ಸದರಿ ಪ್ರಕಟಣೆಯನ್ನು ದಿನ ಪತ್ರಿಕೆಯಲ್ಲಿ ಪ್ರಕಟಿಸಲು ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿಗಳಿಗೆ ಮತ್ತು ನಿಗಮದ ವೆಬ್‌ಸೈಟಿಗೆ ಹಾಕಲು ಗ್ಣಾಕ ವ್ಯವಸ್ಥಾಪಕರಿಗೆ ಪತ್ರ ಬರೆದು ತಮ್ಮ ಸಹಿಗಾಗಿ ಮಂಡಿಸಿದೆ.

| | | |
|---|---|---|
| 1 | ಮ್ಯಾನ್ಯೂಯಲ್ ಟೆಂಡರ್ / ಕೊಟೇಶನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | **06.05.2022 ರಂದು ಬೆಳಿಗ್ಗೆ 11.00 ಘಂಟೆಯೊಳಗಾಗಿ** |
| 2 | ಮ್ಯಾನ್ಯೂಯಲ್ ಟೆಂಡರ್ / ಕೊಟೇಶನ್ ತೆರೆಯುವ ದಿನಾಂಕ | **06.05.2022 ರಂದು ಮದ್ಯಾಹ್ನ 15.00 ಘಂಟೆ** |